ಅ) ಉಡುಪಿ ತಾಲ್ಲೂಕಿನಲ್ಲಿ ಎರಡು ಕಾಮಗಾರಿಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಕುಂದಾಪುರ ತಾಲ್ಲೂಕಿನ ಕಾಮಗಾರಿಗಳಿಗೆ ಮೀನುಗಾರಿಕೆ ಇಲಾಖೆಯಿಂದ ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಟೆಂಡರ್ ಕರೆಯಲಾಗುವುದು.

ಗುಳೇದಗುಡ್ಡ ಕ್ಷೇತ್ರದ ಬೇವೂರ ಪಶು ಚಿಕಿತ್ಸಾ ಕೇಂದ್ರದಲ್ಲಿ ಪಶು ವೈದ್ಯರ ಹುದ್ದೆಗಳು ಖಾಲಿ ಇರುವುದು.

1608(2267) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇದಗುಡ್ಡ ಮತಕ್ಷೇತ್ರದ ಬೇವೂರ ಪಶುಚಿಕಿತ್ಸಾ ಕೇಂದ್ರದಲ್ಲಿ ವೈದ್ಯರ ಹುದ್ದೆ ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ ಎಂದಿನಿಂದ ಖಾಲಿ ಇದೆ? ಇದನ್ನು ಭರ್ತಿ ಮಾಡದಿರುವುದಕ್ಕೆ ಕಾರಣವೇನು? ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ಮತ್ತು ಪಶುವೈದ್ಯ ರಾಜ್ಯ ಸಚಿವರು) :—

ಅ) ಗುಳೇದಗುಡ್ಡ ಮತಕ್ಷೇತ್ರದಲ್ಲಿ ಬರುವ ಬೇವೂರಿನ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರದಲ್ಲಿ ಪಶುವೈದ್ಯರ ಹುದ್ದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ರಸ್ತೆಗಳ ಡಾಂಬರೀಕರಣ.

1609(2236) ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ 1998-99ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿಗೆ (ಡಾಂಬರೀಕರಣ ಇತ್ಯಾದಿ) ಸರ್ಕಾರದವರು ಖರ್ಚು ಮಾಡಿದ ಹಣವೆಷ್ಟು?

ಆ) ಲೋಕೋಪಯೋಗಿ ಇಲಾಖೆಯ ರಸ್ತೆಗಳು ನಾದುರಸ್ತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ದುರಸ್ತಿ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) ವಿಟ್ಲ ವಿಧಾನಸಭಾ ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯವರು ಖರ್ಚು ಮಾಡಿದ ಹಣವೆಷ್ಟು?

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :—

ಅ) ರಾಜ್ಯದಲ್ಲಿ 1998-99ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಡಾಂಬರೀಕರಣಕ್ಕಾಗಿ 131.93 ಕೋಟಿ ರೂ.ಗಳನ್ನು ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿ ಮೀಸಲಿಡಲಾಗಿದೆ. (ನಿಯಮ 60 ಕಾಮಗಾರಿಗಳನ್ನು ಹೊರತುಪಡಿಸಿ)

ಆ) ಹಲವೆಡೆ ಕೆಟ್ಟಿರುವುದು ಗಮನಕ್ಕೆ ಬಂದಿದೆ.

ಇ) ವಾರ್ಷಿಕ ಯೋಜನೇತರ ಅನುದಾನದಲ್ಲಿ ದುರಸ್ತಿ ಮಾಡಲಾಗುತ್ತಿದೆ ಹಾಗೂ ವಿಶ್ವ ಬ್ಯಾಂಕ್ ಸಹಾಯದಲ್ಲಿ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಗೊಳಿಸಲು ಯೋಜಿಸಲಾಗಿದೆ. ಹುಡ್ಕೊ ಸಂಸ್ಥೆಯಿಂದಲೂ ಸಹ ನೆರವು ಪಡೆದು ರಾಜ್ಯದ ರಸ್ತೆಗಳನ್ನು ದುರಸ್ತಿ ಮಾಡಲು ಯೋಜಿಸಲಾಗಿದೆ.

ಈ) ವಿಟ್ಲ ವಿಧಾನಸಭಾ ಕ್ಷೇತ್ರದಲ್ಲಿ 1998-99ನೇ ಸಾಲಿನಲ್ಲಿ ಒಟ್ಟು 97.31 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ರಾಜ್ಯದಲ್ಲಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು.

1610 (2240) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) :— ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಪಶು ಚಿಕಿತ್ಸಾಲಯ ಹಾಗೂ ಪಶು ಆಸ್ಪತ್ರೆಗಳ ಒಟ್ಟು ಸಂಖ್ಯೆ ಎಷ್ಟು ;

ಆ) 10 ವರ್ಷಗಳ ಹಿಂದೆ ಮಂಜೂರು ಮಾಡಲ್ಪಟ್ಟ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳ ಒಟ್ಟು ಸಂಖ್ಯೆ ಎಷ್ಟು, ಅವುಗಳನ್ನು ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ, ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಇ) ವಿಟ್ಲ ವಿಧಾನಸಭಾ ಕ್ಷೇತ್ರದ ಮಂಚಿಬೆಂಜನಪದವು ಕಸ್ಯಾನ, ಅಡ್ಯನಡ್ಕ, ಕುಡ್ತಮುಗೇರು, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಎಲ್ಲಾ ಅನುಕೂಲತೆಗಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?